## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್

**ಸಿ.ಸಿ.849/2018**

ಪಿರ್ಯಾದುದಾರರು : ಕುಣಿಗಲ್ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ : ಲಕ್ಷ್ಮಣಗೌಡ ಮತ್ತೊಬ್ಬರು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ-1**:-ಇದುವರೆವಿಗೂ ನ್ಯಾಯಾಲಯದಲ್ಲಿ ಆದ ಸಾಕ್ಷಿ ವಿಚಾರಣೆಯನ್ನು ಕೇಳಿಸಿಕೊಂಡಿದ್ದೀರಾ?

**A-1ಉತ್ತರಃ-**

**A-2ಉತ್ತರಃ-**

**ಪ್ರಶ್ನೆ-2:-ಪ್ರಾಸಾ-1 ಕೈಲಾಸಮೂರ್ತಿ ರವರು ತಮ್ಮ ಸಾಕ್ಷ್ಯದಲ್ಲಿ** ತನ್ನನ್ನು ದಿನಾಂಕಃ 05.05.2018 ರಂದು ನಿಗಧಿಯಾಗಿದ್ದ ಕರ್ನಾಟಕ ರಾಜ್ಯ ವಿಧಾನಸಭೆಯ ಚುನಾವಣೆಯ ಸಂಬಂಧ ಕುಣಿಗಲ್ ವಿಧಾನಸಭಾ ವ್ಯಾಪ್ತಿಯಲ್ಲಿ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ತಡೆಯುವ ಸಂಬಂಧ ತನ್ನನ್ನು ಮುಖ್ಯಸ್ಥರಾಗಿ ಮಾಡಿ ಒಂದು ತಂಡವನ್ನು ರಚಿಸಿದ್ದು, ಆ ತಂಡದಲ್ಲಿ ಚಾಸಾ.2 ಹಾಗೂ ಇತರರನ್ನು ಮಾನ್ಯ ಜಿಲ್ಲಾಧಿಕಾರಿಗಳು ನೇಮಿಸಿದ್ದು, ಅದರಂತೆ ದಿನಾಂಕಃ 05.05.2018 ರಂದು ತಾನು ಮತ್ತು ತನ್ನ ತಂಡ ಕುಣಿಗಲ್ ನಗರ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವಾಗ್ಗೆ ಕಂಟ್ರೋಲ್ ರೂಮ್ ಅಂದರೆ ತಹಸೀಲ್ದಾರ್ ಕಛೇರಿಯಿಂದ ಸಂಜೆ 6.30 ಕ್ಕೆ ಒಂದು ಮಾಹಿತಿ ಬಂದಿದ್ದು, ಅದರಲ್ಲಿ ಕುಣಿಗಲ್ ನಗರದ ಮಲ್ಲಾಘಟ್ಟದಲ್ಲಿ ಚುನಾವಣಾ ಅಕ್ರಮ ನಡೆಸಲು ಲಕ್ಷ್ಮಣಗೌಡ ಮತ್ತು ನಾರಾಯಣಪ್ಪರವರು ಕೊಟ್ಟಿಗೆಯಲ್ಲಿ ಕೆಲವು ವಸ್ತುಗಳನ್ನು ದಾಸ್ತಾನು ಇಟ್ಟಿದ್ದಾರೆ ಎಂದು ತಿಳಿಸಲಾಗಿ ಅದರಂತೆ ತಾನು ಮತ್ತು ತನ್ನ ತಂಡದ ಸದಸ್ಯರು ಸುಮಾರು 7 ಗಂಟೆ ಸುಮಾರಿಗೆ ಮಲ್ಲಾಘಟ್ಟ ಗ್ರಾಮಕ್ಕೆ ಹೋಗಿ 2ನೇ ಆರೋಪಿಯ ಮನೆಯ ಕೊಟ್ಟಗೆ ಬಳಿ ಹೋದಾಗ ಸದರಿ ಕೊಟ್ಟಿಗೆ ಬೀಗ ಹಾಕಲಾಗಿದ್ದು, ಅದನ್ನು 2ನೇ ಆರೋಪಿಯಿಂದಲೇ ತೆಗೆಸಿ ನೋಡಿದಾಗ ಜೋಳದ ಒಣ ಕಡ್ಡಿಗಳನ್ನು ರಾಶಿ ಹಾಕಲಾಗಿದ್ದು,

ಅದನ್ನು ಸರೆಸಿ ಪರಿಶೀಲಸಿದಾಗ ಅದರಲ್ಲಿ ಒಂದು ದೊಡ್ಡ ಪ್ಲಾಸ್ಟಿಕ್ ಚೀಲದ ಬಂಡಲ್ ಇದ್ದು ಅದನ್ನು ಪರಿಶೀಲಸಿದಾಗ ಸದರಿ ಬಂಡಲ್ ನಲ್ಲಿ ಸೀರೆಯ ಸಣ್ಣ ಸಣ್ಣ ಬಂಡಲ್ ಗಳು ಕಂಡುಬಂದಿದ್ದು, ಸೀರೆಗಳನ್ನು ಲೆಕ್ಕ ಮಾಡಿ ನೋಡಲಾಗಿ ಸುಮಾರು 128 ಸೀರೆಗಳು ಇದ್ದು, ಸದರಿ ಸೀರಗಳ ಮೌಲ್ಯ ತಲಾ 150 ರೂ.ಗಳೆಂದು ವಾಣಿಜ್ಯ ಇಲಾಖೆಯ ಅಧಿಕಾರಿಯಾಗಿದ್ದ ಬಿ.ವಿ. ಮಂಜುನಾಥ್ ರವರ ಮುಖಾಂತರ ಮೌಲ್ಯ ಮಾಪನ ಮಾಡಿಸಿ ನಂತರ ತಿಳಿದುಕೊಂಡಿರುವುದಾಗಿ, ಒಟ್ಟು ಸೀರೆಗಳ ಮೌಲ್ಯ ರೂ.19,200/- ಆಗಿದ್ದು, ಸದರಿ ಸೀರೆಗಳನ್ನು ವಶಕ್ಕೆ ಪಡೆದು ಪೋಲಿಸರಿಗೆ ಹಸ್ತಾಂತರಿಸಿ ಆರೋಪಿಗಳ ವಿರುದ್ಧ ನಿಪಿ.1 ರಂತೆ ದೂರು ದಾಖಲಿಸಿದ್ದು, ನಿಪಿ.2 ರ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸೀರೆಗಳನ್ನು ವಶಕ್ಕೆ ಪಡೆಯುವ ಕಾಲಕ್ಕೆ ತಮ್ಮ ತಂಡದಲ್ಲಿದ್ದ ವಿಡಿಯೋ ಗ್ರಾಫರ್ ಅದನ್ನು ಚಿತ್ರೀಕರಿಸಿದ ನಂತರ ತಾನು ವಿಡಿಯೋ ಸಂಬಧವಾಗಿ ಸಿಡಿಯನ್ನು ಪೋಲಿಸರಿಗೆ ಹಸ್ತಾಂತರಿಸಿದ್ದು, ಆ ಸಮಯದಲದ್ಲಿ ಪೋಲಿಸರು ನಿಪಿ.3 ರಂತೆ ಪಂಚನಾಮೆ ಬರೆದು ನಿಪಿ . 4 ರಂತೆ ಸಿಡಿಯನ್ನು ವಶಕ್ಕೆ ಪಡೆದುಕೊಂಡಿದ್ದು, ಆರೋಪಿತರು ಮತದಾರರಿಗೆ ಹಂಚಿ ಚುನಾವಣಾ ಅಕ್ರಮ ಮಾಡಲು ಇಟ್ಟುಕೊಡಿದ್ದು, ತಾವು ವಶಕ್ಕೆ ಪಡೆದ ಸೀರೆಗಳು ಈಗ ನ್ಯಾಯಾಲಯ ಮುಂದಿರುವ ಸೀರೆಗಳಾಗಿದ್ದು, ಆ ಸೀರೆಗಳು ಎರಡು ರಟ್ಟಿನ ಬಾಕ್ಸ್ ಗಳಲ್ಲಿದ್ದು ಒಂದೊಂದು ರಟ್ಟಿನ ಬಾಕ್ಸ್ ಅನ್ನು ಪ್ರತ್ಯೇಕವಾಗಿ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**A-1ಉತ್ತರಃ-**

**A-2ಉತ್ತರಃ-**

**ಪ್ರಶ್ನೆ-3:-ಪ್ರಾಸಾ-2 ಸದಾಶಿವಯ್ಯ ರವರು ತಮ್ಮ ಸಾಕ್ಷ್ಯದಲ್ಲಿ** ದಿನಾಂಕಃ 05.05.2018 ರಂದು ತಾನು ಮತ್ತು ಚಾಸಾ.3 ರವರಿಗೆ ಕುಣಿಗಲ್ ವಿಧಾನಸಭಾ ಚುನವಾಣಾ ಪ್ರಯುಕ್ತ ಪ್ಲೆಯಿಂಗ್ ಸ್ಕ್ವಾಡ್ ನ ಸದಸ್ಯರಾಗಿ ಚುನಾವಣಾ ಅಕ್ರಮ ತಡೆಯಲು ಚಾಸಾ.1 ರವರ ಜೊತೆ ನಿಯೋಜಿಸಲಾಗಿದ್ದು, ಚಾಸಾ.1 ರವರು ತಮ್ಮ ಇಲಾಖಾ ವಾಹನದಲ್ಲಿ ಕುಣಗಲ್ ನ ಮಲ್ಲಾಘಟ್ಟದ ಲಕ್ಷ್ಮಣರವರ ಕೊಟ್ಟಿಗೆಯಲ್ಲಿ ಚುನಾವಣಾ ಅಕ್ರಮ ಎಸಗಲು ಸೀರೆಗಳನ್ನು ಬಚ್ಚಿಟ್ಟಿದ್ದಾರೆಂದು ಕೊಟ್ಟಿಗೆ ಒಳಗೆ ಹೋಗಿ ಪರಿಶೀಲಿಸಿದಗ ಜೋಳದ ಮೇವನ್ನು ಹೊದಸಿ ಕೆಳಗೆರಡು ದೊಡ್ಡ ರಟ್ಟಿನ ಬಾಕ್ಸ್ ಗಳು ಇದ್ದು ಅವುಗಳನ್ನು ಪರಿಶೀಲಿಸಿದಾಗ ಸುಮಾರು 128 ಸೀರೆಗಳು ಇದ್ದು, ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ವಶಕ್ಕೆ ಪಡೆದುಕೊಂಡಿದ್ದು, ಆ ಸೀರೆಗಳನ್ನು ತಾನು ನ್ಯಾಯಾಲಯ ಮುಂದೆ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಿದ್ದು, ಸದರಿ ಪಂಚನಾಮೆಗೆ ತಾನು ಸಹಿ ಮಾಡಿದ್ದು, ಆ ಸಮಯದಲ್ಲಿ ಆರೋಪಿತರು ಹಾಜರಿರುವುದಾಗಿ

ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**A-1ಉತ್ತರಃ-**

**A-2ಉತ್ತರಃ-**

**ಪ್ರಶ್ನೆ-4:-ಪ್ರಾಸಾ-3 ಪರಮೇಶ್ವರಪ್ಪ ರವರು ತಮ್ಮ ಸಾಕ್ಷ್ಯದಲ್ಲಿ** ದಿನಾಂಕಃ 05.05.2018 ರಂದು ತಾನು ಮತ್ತು ಚಾಸಾ.3 ರವರಿಗೆ ಕುಣಿಗಲ್ ವಿಧಾನಸಭಾ ಚುನವಾಣಾ ಪ್ರಯುಕ್ತ ಪ್ಲೇಯಿಂಗ್ ಸ್ಕ್ವಾಡ್ ನ ಸದಸ್ಯರಾಗಿ ಚುನಾವಣಾ ಅಕ್ರಮ ತಡೆಯಲು ಚಾಸಾ.1 ರವರ ಜೊತೆ ನಿಯೋಜಿಸಲಾಗಿದ್ದು , ಚಾಸಾ.1 ರವರು ತಮ್ಮ ಇಲಾಖಾ ವಾಹನದಲ್ಲಿ ಕುಣಗಲ್ ನ ಮಲ್ಲಾಘಟ್ಟದ ಲಕ್ಷ್ಮಣರವರ ಕೊಟ್ಟಿಗೆ ಬಳಿ ತಮ್ಮನ್ನು ಹಾಗೂ ಚಾಸಾ.6 ಮತ್ತು 7 ರವರನ್ನು ಕರೆದುಕೊಂಡು ಹೋಗಿದ್ದು,ಸದರಿ ಕೊಟ್ಟಿಗೆಯಲ್ಲಿ ಚುನಾವಣಾ ಅಕ್ರಮ ಎಸಗಲು ಸೀರೆಗಳನ್ನು ಬಚ್ಚಿಟ್ಟಿದ್ದಾರೆಂದು ಕೊಟ್ಟಿಗೆ ಒಳಗೆ ಹೋಗಿ ಪರಿಶೀಲಿಸಿದಗ ಜೋಳದ ಮೇವನ್ನು ಹೊದಸಿ ಕೆಳಗೆರಡು ದೊಡ್ಡ ರಟ್ಟಿನ ಬಾಕ್ಸ್ ಗಳು ಇದ್ದು ಅವುಗಳನ್ನು ಪರಿಶೀಲಿಸಿದಾಗ ಸುಮಾರು 128 ಸೀರೆಗಳು ಇದ್ದು, ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ವಶಕ್ಕೆ ಪಡೆದುಕೊಂಡಿದ್ದು, ಆ ಸೀರೆಗಳನ್ನು ತಾನು ನ್ಯಾಯಾಲಯ ಮುಂದೆ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಿದ್ದು, ಸದರಿ ಪಂಚನಾಮೆಗೆ ತಾನು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**A-1ಉತ್ತರಃ-**

**A-2ಉತ್ತರಃ-**

**ಪ್ರಶ್ನೆ-5:-ಪ್ರಾಸಾ- 6 ಎಸ್ ನಾಗರಾಜು ರವರು ತಮ್ಮ ಸಾಕ್ಷ್ಯದಲ್ಲಿ** 2018ರಲ್ಲಿ ಚಾಸಾ.1 ರವರನ್ನು Flying squad ಅಧಿಕಾರಿಯಾಗಿ ಜಿಲ್ಲಾಧಿಕಾರಿಗಳು ನೇಮಿಸಿದ್ದು, ಸದರಿ ಆದೇಶವನ್ನು ನಿಪಿ.5 ರಂತೆ ಚಾಸಾ.1 ರವರಿಗೆ ಜಾರಿ ಮಾಡಿ ಅವರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು,ಮುಂದುವರೆದು, ತನಿಖಾಧಿಕಾರಿಯ ನಿವೇದನೆಯ ಮೇರೆಗೆ ನಿಪಿ.6ರಂತೆ ಪಹಣಿಯನ್ನು ತನಿಖಾಧಿಕಾರಿಗೆ ಸಲ್ಲಿಸಿದ್ದು, ಸದರಿ ಪಹಣಿ ನೀಡಿದ ಕುರಿತು ತಮ್ಮ ಕಚೇರಿಯಿಂದ ತನಿಖಾಧಿಕಾರಿಗೆ ಪತ್ರ ಕಳುಹಿಸಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**A-1ಉತ್ತರಃ-**

**A-2ಉತ್ತರಃ-**

**ಪ್ರಶ್ನೆ-6:-ಫ್ರಾಸಾ-8 ಶ್ರೀಧರ್ ರವರ ತಮ್ಮ ಸಾಕ್ಷ್ಯದಲ್ಲಿ** ದಿನಾಂಕಃ 05.05.2018 ರಂದು ತಾನು ರಾತ್ರಿ ಠಾಣಾಧಿಕಾರಿ ಕರ್ತವ್ಯದಲ್ಲಿದ್ದು, ಮಧ್ಯರಾತ್ರಿ 12.40 ರ ಸಮಯದಲ್ಲಿ ಚಾಸಾ.1 ರವರು ನೀಡಿದ ನಿಪಿ.1 ರಂತೆ ದೂರನ್ನು ಪಡೆದು ಎನ್ ಸಿ ಆರ್ 340/2018 ನ್ನು ದಾಖಲಿಸಿಕೊಂಡಿದ್ದು, ನಂತರ ಅನುಮತಿಗಾಗಿ ಅದೇ ದಿನ ನ್ಯಾಯಾಲಯಕ್ಕೆ ನಿಪಿ.7 ರಂತೆ ಪ್ರ.ವ.ವರದಿಯನ್ನು ದಾಖಲಿಸಲು ಮನವಿ ಸಲ್ಲಿಸಿದ್ದು, ದಿನಾಂಕಃ 06.05.2018 ರಂದು ಬೆಳಿಗ್ಗೆ ಜಾವ 3.00 ರ ಸಮಯಕ್ಕೆ ನ್ಯಾಯಾಲಯದ ಹೆಚ್ ಸಿ-297 ಯೋಗೇಶ್ ರವರು ಠಾಣೆಗೆ ನೀಡಿದ ಪಿರ್ಯಾದನ್ನು ಸ್ವಿಕರಿಸಿ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ತಮ್ಮ ಸಿಬ್ಬಂದಿಯವರು ನ್ಯಾಯಾಲಯದಿಂದ ತಂದು ನಿಪಿ.8 ರಂತೆ ನೀಡಿದ ನಿವೇದನೆಯಲ್ಲಿ ಸಹಿ ಮಾಡಿದ್ದು, ಮುಂದುವರಿದು, ಚಾಸಾ.1 ರವರು ಹಾಜರುಪಡಿಸಿದ 128 ಬಣ್ಣ ಬಣ್ಣದ ಸೀರೆಗಳನ್ನು ಅದೇ ದಿನ ಬೆಳಗಿನ ಜಾವ 3.30 ರಿಂದ 4.30 ರ ಸಮಯದಲ್ಲಿ ತಮ್ಮ ಠಾಣಾ ಆವರಣದಲ್ಲಿ ಚಾಸಾ.7 ರವರ ಸಮಕ್ಷಮ ನಿಪಿ.2 ರಂತೆ ಅಮಾನತು ಪಂಚನಾಮೆ ಜರುಗಿಸಿದ್ದು , ನಿಪಿ.2 ರ ಮಾಲುಗಳ ಕುರಿತು ನಿಪಿ.9 ರಂತೆ ಮಾಲು ಪಟ್ಟಿಸಂಃ40/18 ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಮುಂದಿನ ತನಿಖೆಗಾಗಿ ಚಾಸಾ.13 ರವರಿಗೆ ಕಡತವನ್ನು ಹಸ್ತಾಂತರಿಸಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**A-1ಉತ್ತರಃ-**

**A-2ಉತ್ತರಃ-**

**ಪ್ರಶ್ನೆ-7:-ಫ್ರಾಸಾ-9 ರವಿಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ** ತಾನು ಕೆಎ-06ಜಿ-754 ಟಾಟ ಸುಮೋ ದ ಚಾಲಕನಾಗಿ 2018ರಲ್ಲಿ ಚುನಾವಾಣೆ ಕರ್ತವ್ಯಕ್ಕೆ ನಿಯೋಜನೆಯಾಗಿದ್ದು, ಅದರಂತೆ ದಿನಾಂಕ 05.05.2018 ರಂದು ರಾತ್ರಿ 8.45 ಗಂಟೆಯ ಸಮಯದಲ್ಲಿ ಚಾಸಾ.1 ರವರು Flying squad ಅಧಿಕಾರಿಯಾಗಿದ್ದು, ಅವರಿಗೆ ಕರೆ ಬಂದಿದ್ದು, ಅದರಂತೆ ತಾನು ಮತ್ತು ಚಾಸಾ.1 ರಿಂದ 3 ರವರು ಮಲ್ಲಘಟ್ಟದ ಒಂದನೇ ಆರೋಪಿಯ ಮನೆಗೆ ರಾತ್ರಿ 9.15 ರಿಂದ 9.20 ರ ವೇಳೆಗೆ ಹೋಗಿದ್ದಾಗಿ, ಆ ಸಮಯದಲ್ಲಿ ತಾನು ತನ್ನ ವಾಹನದಲ್ಲಿ ಇದ್ದು, ಚಾಸಾ.1 ರಿಂದ 3 ರವರು ಒಂದನೇ ಆರೋಪಿಯ ಮನೆಗೆ ಹೋಗಿ ಮಹಜರ್ ಮಾಡಿದ್ದು , ಸದರಿ ಮಹಜರ್ ಮಾಡುವಾಗ, ತಾನು ಹೋಗಿ ನೋಡಿದಾಗ, ದನದ ಕೊಟ್ಟಿಗೆಯಲ್ಲಿ ಒಂದು ಬಂಡಲ್ ಸೀರೆ ಇದ್ದು , ತಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಾಗಿ, ಸದರಿ ಸೀರೆ ಬಂಡಲ್ ನಲ್ಲಿ 128 ಸೀರೆ ಇದ್ದು, ಸದರಿ ಸೀರೆಗಳ ಬೆಲೆ ರೂ.150/- ರಿಂದ 200/- ಇರುವುದಾಗಿ, ಆ ಸೀರೆಗಳನ್ನು ಈಗಾಗಲೇ ಎಂಓ-1 ಎಂದು ಗುರುತಿಸಿರುವ ಸೀರೆಗಳೇ ಆಗಿರುವುದಾಗಿ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**A–1ಉತ್ತರಃ–**

**A–2ಉತ್ತರಃ–**

**ಪ್ರಶ್ನೆ–8:–**ನಿಮಗೆ ಇದಕ್ಕೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

**A–1ಉತ್ತರಃ–**

**A–2ಉತ್ತರಃ–**

**ಪ್ರಶ್ನೆ–9:–**ನಿಮ್ಮ ಪರವಾಗಿ ಸಾಕ್ಷಿಗಳು ಇದ್ದಾರೆಯೇ?

**A–1ಉತ್ತರಃ–**

**A–2ಉತ್ತರಃ–**

(ದಿನಾಂಕ 03.06.2026 ರಂದು ಈ ಮೇಲಿನಂತೆ ಆರೋಪಿಗೆ ಪ್ರಶ್ನಿಸಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ)

**Sd/–**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಕುಣಿಗಲ್**